KATK010006502022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.19/2022</u>**

ಪ್ರಾ.ಸಾ. ಃ **1**

ದೋ.ಸಾ. ಃ **2**

ದಿ.**18.03.2025**

| | |
|---|---|
| ಹೆಸರು | ಃ ಡಾ.ಕುಮಾರ್ ಎ.ಎಂ. |
| ತಂದೆಯ ಹೆಸರು | ಃ ಮುನಿಸ್ವಾಮಯ್ಯ |
| ವಯಸ್ಸು | ಃ **38** ವರ್ಷ |
| ಉದ್ಯೋಗ | ಃ ಹಿರಿಯ ಪಶು ವೈದ್ಯಾಧಿಕಾರಿ, ಹಿರೇಹಳ್ಳಿ |
| ವಾಸಸ್ಥಳ | ಃ ತುಮಕೂರು |

ಸಾಕ್ಷಿಯನ್ನು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ನಾನು ಅಕ್ಟೋಬರ್ 2016 ರಿಂದ ಜೂನ್ 2022 ರವರೆಗೆ ನಾನು ತೊಂಡೆಗೆರೆ ಪಶು ಚಿಕಿತ್ಸಾಲಯದಲ್ಲಿ ಪಶು ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆನು. ಹೆಬ್ಬೂರು ಪಶು ಆಸ್ಪತ್ರೆಯಲ್ಲಿ ಪ್ರಭಾರ ಪಶು ವೈದ್ಯಾಧಿಕಾರಿಯಾಗಿದ್ದೆನು.
2. ದಿ.30.06.2021 ರಂದು ನಾನು ಹೆಬ್ಬೂರು ಪಶು ಚಿಕಿತ್ಸಾಲಯದಲ್ಲಿ ಕರ್ತವ್ಯದಲ್ಲಿದ್ದಾಗ ಗಾಂಜಾ ಪ್ರಕರಣದಲ್ಲಿ ಮಹಜರಿಗೆ ಸಹಕರಿಸಲು ಕೋರಿ ಹೆಬ್ಬೂರು ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಪತ್ರವನ್ನು ಕೊಟ್ಟಿದ್ದರು. ಆ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ನಾನು ಮತ್ತು ನಮ್ಮ ಆಸ್ಪತ್ರೆಯ ಡಿ ಗ್ರೂಪ್ ನೌಕರ ಶ್ರೀನಿವಾಸಮೂರ್ತಿ ಹೆಬ್ಬೂರು ಪೋಲೀಸ್ ಠಾಣೆಗೆ ಹೋದೆವು. ಪೋಲೀಸ್ ಠಾಣೆಗೆ ಒಬ್ಬ ಗ್ರಾಮ ಸಹಾಯಕ ಮತ್ತು ಫೋಟೋಗ್ರಾಫರ್ ಬಂದರು. ಆ ಸಮಯದಲ್ಲಿ ನಾನು ಪತ್ರಾಂಕಿತ ಅಧಿಕಾರಿಯಾಗಿದ್ದೆನು. ನಾನು

ಪತ್ರಾಂಕಿತ ಅಧಿಕಾರಿಯಾಗಿದ್ದರಿಂದ ಹುಲ್ಲೇನಹಳ್ಳಿ ಗೇಟಿನ ಬಳಿ ಗಾಂಜಾ ಪ್ರಕರಣದಲ್ಲಿ ಮೂವರನ್ನು ಹಿಡಿದಿದ್ದೇವೆ, ನಮ್ಮ ಜೊತೆಗೆ ಪಂಚನಾಮೆಗೆ ಸಹಕರಿಸಬೇಕೆಂದು ಪೋಲೀಸರು ಕೇಳಿದರು.

3. ನಾವೆಲ್ಲಾ ಸರ್ಕಾರಿ ಜೀಪಿನಲ್ಲಿ ಹುಲ್ಲೇನಹಳ್ಳಿ ಗೇಟಿನ ಬಳಿ ಹೋದೆವು. ಅಲ್ಲಿ 3 ಜನ ಆಸಾಮಿಗಳು ಇದ್ದರು. ಈಗ ನನಗೆ ತೋರಿಸಿದ ನೋಟೀಸಿನಲ್ಲಿ ನನ್ನ ಸಹಿ ಇದೆ. ಆ ನೋಟೀಸನ್ನು ನಿಶಾನೆ ಪಿ2 ಎಂದು, ನನ್ನ ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. ಆರೋಪಿತರ ಅಂಗಶೋಧನೆ ಮಾಡಲು ಆ ನೋಟೀಸನ್ನು ಕೊಟ್ಟಿದ್ದೆನು. ಅಂಗಶೋಧನೆ ಮಾಡಲು ಆರೋಪಿತರು ಒಪ್ಪಿ ಸಹಿ ಮಾಡಿ ಪತ್ರವನ್ನು ಕೊಟ್ಟಿದ್ದಾರೆ. ಅದನ್ನು ನಿಶಾನೆ ಪಿ3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ3(ಎ) ಎಂದು ಗುರುತಿಸಲಾಯಿತು. ಅದರಲ್ಲಿರುವ ಆರೋಪಿತರುಗಳ ಸಹಿಗಳನ್ನು ನಿಶಾನೆ ಪಿ3(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು.ಒಬ್ಬರು ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ. ಆರೋಪಿತರ ಅಂಗಶೋಧನೆಯನ್ನು ಮಾಡಿದೆನು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು